KAHS200004002020

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಆಲೂರು.

ಉಪಸ್ಥಿತರುಃ– ಶ್ರೀಮತಿ ಸ್ನೇಹಾ ಎಂ.
ಬಿ.ಎ.,ಎಲ್‌ಎಲ್.ಬಿ.,
ಸಿವಿಲ್ ನ್ಯಾಯಾಧೀಶರು,
ಮತ್ತು ಪ್ರಥಮ ದರ್ಜೆ ನ್ಯಾಯಿಕ
ದಂಡಾಧಿಕಾರಿಗಳು, ಆಲೂರು.

ಸಿ.ಸಿ.ನಂ. 142/2020

ದಿನಾಂಕಃ 4ನೇ ಏಪ್ರಿಲ್ 2026

ಪಿರ್ಯಾದುದಾರರುಃ ಕರ್ನಾಟಕ ಸರ್ಕಾರದ ಪರವಾಗಿ,
ಅಬಕಾರಿ ನಿರೀಕ್ಷಕರು
ಹಾಸನ ವಲಯ ನಂ.2,
ಹಾಸನ.
(ಸಹಾಯಕ ಸರ್ಕಾರಿ ಅಭಿಯೋಜಕರು)

– ವಿರುದ್ಧ–

ಆರೋಪಿಃ **ಶ್ರೀಮತಿ ಭಾಗ್ಯ**
ಕೋಂ ಲೇಟ್ ಜಯಕುಮಾರ್
ಸುಮಾರು 55 ವರ್ಷ,
ವಾಸಃ ಹಸಗನೂರು ಗ್ರಾಮ,
ಕುಂದೂರು ಹೋಬಳಿ,
ಆಲೂರು ತಾಲ್ಲೂಕು,
ಹಾಸನ ಜಿಲ್ಲೆ.

(ಶ್ರೀ **ಟಿ.ಎಸ್.ಎಸ್,** ವಕೀಲರು)

1. ಕೃತ್ಯ ಎಸಗಿದ ದಿನಾಂಕ	06.11.2019
2. ಅಪರಾಧ ವರದಿ ಮಾಡಿದ ದಿನಾಂಕ	06.11.2019
3.ಫಿರ್ಯಾದುದಾರ/ಬಾತ್ಮಿದಾರರ ಹೆಸರು	ವನಜಾಕ್ಷಿ ಆರ್.ಎನ್
4. ಸಾಕ್ಷಿದಾರರ ವಿಚಾರಣೆ ಪ್ರಾರಂಭವಾದ ದಿನಾಂಕ	22.08.2025
5. ಸಾಕ್ಷಿದಾರರ ವಿಚಾರಣೆ ಕೊನೆಗೊಂಡ ದಿನಾಂಕ	11.09.2025
6. ದೂಷಿಸಲಾದ ಆರೋಪಗಳು	ಕರ್ನಾಟಕ ಅಬಕಾರಿ ಕಾಯ್ದೆ ಕಲಂ 14, 32(1)
9. ಪಿಠಾಸೀನಾಧಿಕಾರಿಗಳ ಅಭಿಪ್ರಾಯಃ	ಆರೋಪಿಯನ್ನು ನಿರ್ದೋಷಿ ಎಂದು ಪರಿಗಣಿಸಿದೆ.

ತೀರ್ಪು

ಈ ಪ್ರಕರಣವನ್ನು ಅಬಕಾರಿ ನಿರೀಕ್ಷಕರು, ಹಾಸನ ವಲಯ ನಂ.2, ಹಾಸನ ಪೊಲೀಸರು ಆರೋಪಿಯ ವಿರುದ್ಧ ಕರ್ನಾಟಕ ಅಬಕಾರಿ ಕಾಯ್ದೆ ಕಲಂಃ 14, 32(1) ರಡಿಯಲ್ಲಿನ ಶಿಕ್ಷಾರ್ಹ ಅಪರಾಧಗಳ ಕುರಿತು ಪ್ರಕರಣವನ್ನು ದಾಖಲಿಸಿರುತ್ತಾರೆ.

2. ಅಭಿಯೋಜನೆಯ ಪ್ರಕಾರ ದಿನಾಂಕಃ06.11.2019 ರಂದು ಸಂಜೆ 2.00 ಗಂಟೆಯ ಸಮಯದಲ್ಲಿ ಅಬಕಾರಿ ಉಪ ಅಧೀಕ್ಷಕರು, ಹಾಸನ ವಲಯ-2, ಹಾಸನ ರವರ ನಿರ್ದೇಶನದಂತೆ, ಅಬಕಾರಿ ನಿರೀಕ್ಷಕರರು ಹಾಗೂ ಅಬಕಾರಿ ಸಿಬ್ಬಂದಿಯೊಂದಿಗೆ ಗಸ್ತು

ಮಾಡುತ್ತಿದ್ದಾಗ ಬಂದ ಖಚಿತ ಮಾಹಿತಿ ಮೇರೆಗೆ ಚಾಕನಹಳ್ಳಿ ಗ್ರಾಮದಿಂದ ಹಸಗನೂರು ಗ್ರಾಮಕ್ಕೆ ಹೋಗುವ ಬಸ್ ನಿಲ್ದಾಣದಲ್ಲಿ ಒಬ್ಬ ಮಹಿಳೆ ಹಸಗನೂರು ಬಸ್ ನಿಲ್ದಾಣ ಬಳಿ ಒಂದು ಪ್ಲಾಸ್ಟಿಕ್ ಚೀಲವನ್ನು ಹಿಡಿದುಕೊಂಡಿದ್ದು, ಸಮವಸ್ತ್ರವನ್ನು ಧರಿಸಿದ್ದ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೋಡಿ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೇ ಬಿಟ್ಟು ಓಡಿ ಹೋಗಿರುತ್ತಾರೆ. ನಂತರ ಪಂಚರ ಸಮಕ್ಷಮದಿಂದ ಚೀಲವನ್ನು ತೆರೆದು ನೋಡಲಾಗಿ 90 ಮಿಲಿಯ 26 ಓರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂಬ ಹೆಸರಿನ ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಕಂಡು ಬಂದಿದ್ದು, ಮಧ್ಯವನ್ನು ಮಾರಾಟಕ್ಕಾಗಿ ಅಕ್ರಮವಾಗಿ ದಾಸ್ತಾನು ಹೊಂದಿರುವುದು ತನಿಖೆಯಿಂದ ಧೃಢಿಪಟ್ಟಿದ್ದರಿಂದ ಆರೋಪಿಯ ವಿರುದ್ಧ ಮೇಲ್ಕಂಡ ಕಲಂಗಳ ರೀತ್ಯಾ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ಆರೋಪಿಯು ತಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ತನಿಖಾಧಿಕಾರಿಯು ತನಿಖೆ ನಡೆಸಿ ಆರೋಪಿಯ ವಿರುದ್ಧ ಮೇಲ್ಕಾಣಿಸಿದ ಕಲಂಗಳ ಅಡಿಯಲ್ಲಿ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತಾರೆ. ನ್ಯಾಯಾಲಯವು ಕರ್ನಾಟಕ ಅಬಕಾರಿ ಕಾಯಿದೆ ಕಲಂಃ 32(1) ಮತ್ತು 14 ರಡಿಯಲ್ಲಿ ಅಂಶಗಳು ಕಂಡು ಬಂದ ಕಾರಣ ಸದರಿ ಕಲಂಗಳಿಗೆ ಸಂಭಂದಪಟ್ಟಂತೆ ಆರೋಪಿಯ ವಿರುದ್ಧ ಆರೋಪಣೆಯನ್ನು ಸಿದ್ಧಪಡಿಸಿ ಅವರಿಗೆ ತಿಳಿದ ಕನ್ನಡ ಭಾಷೆಯಲ್ಲಿ

ಓದಿ ಹೇಳಿ ಕೇಳಲಾಗಿ ಅವರು ಆರೋಪಣೆಯನ್ನು ಅಲ್ಲಗಳೆದಿರುತ್ತಾರೆ. ನ್ಯಾಯಾಲಯವು ಅಭಿಯೋಜನೆಯ ಸಾಕ್ಷಿದಾರರ ವಿಚಾರಣೆಗಾಗಿ ಸಮನ್ಸನ್ನು ಹೊರಡಿಸಿರುತ್ತದೆ.

4. ಅಭಿಯೋಜನೆಯು ತನ್ನ ಪ್ರಕರಣವನ್ನು ಸಾಬೀತುಪಡಿಸಲು 4 ಜನ ಸಾಕ್ಷಿದಾರರನ್ನು ಪಟ್ಟಿ ಮಾಡಿದ್ದು ಅದರಲ್ಲಿ ಚಾಸಾ-3, 1, 2 ಮತ್ತು 6 ರವರನ್ನು ಫ್ರಾಸಾ-1 ರಿಂದ 4 ಎಂದು ವಿಚಾರಣೆ ಮಾಡಿ ನಿಪಿ-1 ರಿಂದ 7 ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತದೆ ಹಾಗೂ ಜಪ್ತುಪಡಿಸಿಕೊಂಡ ವಿವಿಧ ಕಂಪನಿಯ 26 ಟೆಟ್ರಾ ಪ್ಯಾಕೇಟ್‌ಗಳನ್ನು ಮು.ಮಾ-1 ಎಂದು ಮತ್ತು ಚೀಲವನ್ನು ಮು.ಮಾ-2 ಎಂದು ಗುರುತಿಸಿಕೊಂಡಿರುತ್ತದೆ.

5. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯ ಮುಗಿದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಳ್ಳಲಾಗಿದೆ. ಆರೋಪಿಯು ತಮ್ಮ ವಿರುದ್ಧದ ಸಾಕ್ಷ್ಯವನ್ನು ಅಲ್ಲಗಳೆದಿರುತ್ತಾರೆ ಹಾಗೂ ತಮ್ಮ ಪರವಾಗಿ ಯಾವುದೇ ಪ್ರತಿರಕ್ಷಣಾ ಸಾಕ್ಷ್ಯವನ್ನು ನ್ಯಾಯಾಲಯದ ಮುಂದೆ ಒದಗಿಸಿರುವುದಿಲ್ಲ.

6. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರ ಹಾಗೂ ಆರೋಪಿಯ ಪರ ವಕೀಲರ ವಾದ ವಿವಾದಗಳನ್ನು ಆಲಿಸಲಾಯಿತು ಹಾಗೂ ಲಭ್ಯ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಲಾಯಿತು.

7. ಈ ಮೇಲೆ ಹೇಳಿದ ಪ್ರಕರಣದ ವಸ್ತುಸ್ಥಿತಿಗಳ ಆಧಾರದ ಮೇಲೆ ನ್ಯಾಯಾಲಯವು ಈ ಕೆಳಂಡ ಅಂಶಗಳನ್ನು ನಿರ್ಧರಿಸಬೇಕಾಗಿರುತ್ತದೆ.

1. ದಿನಾಂಕಃ06.11.2019 ರಂದು ಮಧ್ಯಾಹ್ನ ಸುಮಾರು 2.00 ಗಂಟೆಯ ಸಮಯದಲ್ಲಿ ಆಲೂರು ಪೊಲೀಸ್ ಠಾಣೆಗೆ ಸೇರಿದ ಆಲೂರು ತಾಲ್ಲೂಕು, ಕುಂದೂರು ಹೋಬಳಿ, ಹಸಗನೂರು ಬಸ್ ನಿಲ್ದಾಣದಲ್ಲಿ ಆರೋಪಿಯು ಯಾವುದೇ ಪರವಾನಗಿ ಇಲ್ಲದೇ ಚೀಲದಲ್ಲಿ 90 ಮಿಲಿಯ 26 ಒರಿಜಿನಲ್ ಚಾಯ್ಸ್ ಡೀಲಕ್ಸ್ ವಿಸ್ಕಿ ಎಂಬ ಹೆಸರಿನ ಮಧ್ಯ ತುಂಬಿದ ಟೆಟ್ರಾ ಪ್ಯಾಕ್ ಗಳು ಅಕ್ರಮವಾಗಿ ಮಧ್ಯ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಿರುತ್ತಾರೆ. ಆದ್ದರಿಂದ ಆರೋಪಿಯು ಕರ್ನಾಟಕ ಅಬಕಾರಿ ಕಾಯಿದೆ ಕಲಂ 32(1) ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎನ್ನುವುದಾಗಿ ಅಭಿಯೋಜನೆ ಸಂಶಯಾತೀತವಾಗಿ ರುಜುವಾತು ಪಡಿಸುತ್ತದೆಯೇ?

2. ಏನು ಆದೇಶ?

8. ಮೇಲ್ಕಂಡ ಅಂಶಗಳಿಗೆ ಈ ಕೆಳಗೆ ಕಾಣಿಸಿದ ಕಾರಣಗಳಿಗಾಗಿ ನನ್ನ ಉತ್ತರ ಈ ಕೆಳಗಿನಂತಿರುತ್ತದೆಃ

ಅಂಶ ನಂ.1: **ನಕಾರಾತ್ಮಕವಾಗಿ**

ಅಂಶ ನಂ.2: ಅಂತಿಮ ಆದೇಶದಂತೆ
ಕೆಳಕಂಡ ಕಾರಣಗಳ ಪ್ರಕಾರ

ಕಾ ರ ಣ ಗ ಳು

9. **ಅಂಶ ನಂ**.1: ಅಭಿಯೋಜನೆಯು ಚಾಸಾ–3 ಮತ್ತು 6 ರವರನ್ನು ಪ್ರಾಸಾ–1 ಮತ್ತು 4 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ಕರಿಗೋಡನಹಳ್ಳಿ ಗ್ರಾಮದಿಂದ ಚಾಕನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಗಸ್ತು ಮಾಡುತ್ತಿರುವಾಗ ಹಸನೂರು ಗ್ರಾಮಕ್ಕೆ ಅಕ್ರಮವಾಗಿ ಮಧ್ಯ ತೆಗೆದುಕೊಂಡು ಹೋಗುತ್ತಿರುವ ಬಗ್ಗೆ ಮಾಹಿತಿ ಬಂದ ಆಧಾರದ ಮೇಲೆ ಚಾಸಾ–1 ಮತ್ತು 2 ರವರೊಂದಿಗೆ ಹಸನೂರು ಗ್ರಾಮದ ಬಸ್ ನಿಲ್ದಾಣದ ಬಳಿ ಹೋದಾಗ ಸಮವಸ್ತ್ರದಲ್ಲಿದ್ದ ತಮ್ಮನ್ನು ನೋಡಿ ಒಬ್ಬ ಮಹಿಳೆ ಬಿಳಿ ಚೀಲ ಬಿಟ್ಟು ಓಡಿ ಹೋಗಿರುತ್ತಾರೆ, ಅವರನ್ನು ಹಿಡಿಯಲು ಪ್ರಯತ್ನಿಸಿದ್ದು ಸಿಕ್ಕಿರುವುದಿಲ್ಲ ಎಂದು ನುಡಿದಿರುತ್ತಾರೆ, ಸ್ಥಳದಲ್ಲಿದ್ದ ಚೀಲವನ್ನು ತೆಗೆದು ನೋಡಲಾಗಿ 90 ಎಂ.ಎಲ್ ನ ಒರಿಜಿನಲ್ ಚಾಯ್ಸ್ ವಿಸ್ಕಿ 26 ಟೆಟ್ರಾ ಪ್ಯಾಕ್ ಗಳು ದೊರಕಿದ್ದು, ಅವುಗಳನ್ನು ಬಿಳಿ ಬಟ್ಟೆಯಿಂದ ಸುತ್ತಿ ಅಮಾನತ್ತುಪಡಿಸಿಕೊಂಡಿರುತ್ತೇವೆ ಎಂದು ನುಡಿದಿರುತ್ತಾರೆ, ಪ್ರಾಸಾ–4 ರವರು ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿ ಚಾಸಾ–5 ರ ಮುಖಾಂತರ ಮು.ಮಾ ವನ್ನು ಎಫ್ ಎಸ್ ಎಲ್ ಗೆ ಕಳಿಸಿರುವುದಾಗಿ ನುಡಿದಿರುತ್ತಾರೆ. ಸಾಕ್ಷಿ ಮಹಜರ್ ನಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರ್ ನ್ನು ನಿಪಿ–1 ಎಂದು, ಸಾಕ್ಷಿಯ ಸಹಿಯನ್ನು ನಿಪಿ–1

ಗುರುತಿಸಿದ್ದು, 26 ಟೆಟ್ರಾ ಪ್ಯಾಕ್ ಗಳನ್ನು ಮು.ಮಾ1 ಎಂದು, ಪ್ಲಾಸ್ಟಿಕ್ ಚೀಲವನ್ನು ಮು.ಮಾ–2 ಎಂದು ಗುರುತಿಸಲಾಗಿರುತ್ತದೆ.

10. ಆರೋಪಿ ಪರ ವಕೀಲರನ್ನು ಪ್ರಾಸಾ–1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಬಸ್ ನಿಲ್ದಾಣದ ಯಾವ ಭಾಗದಲ್ಲಿ ಚೀಲ ಸಿಕ್ಕಿರುತ್ತದೆ ಎಂದರೆ ಬಲಭಾಗದ ರಸ್ತೆಯಲ್ಲಿ, ಬಸ್ ನಿಲ್ದಾಣದ ಬಳಿ 3 ರಸ್ತೆಗಳು ಸೇರುತ್ತವೆ, ಯಾವ ರಸ್ತೆಯಲ್ಲಿ ಚೀಲ ಸಿಕ್ಕಿರುತ್ತದೆ ಎಂದರೆ ಹಸನೂರು ಗ್ರಾಮದ ರಸ್ತೆಯಲ್ಲಿ, ಸ್ಥಳ ಮಹಜರ್ ನಲ್ಲಿ ಸ್ಥಳದ ಪೂರ್ವದಲ್ಲಿ ಚಾಕನಹಳ್ಳಿ ರಸ್ತೆ, ಪಶ್ಚಿಮಕ್ಕೆ ಹಸನೂರು ರಸ್ತೆ, ಉತ್ತರಕ್ಕೆ ಆಲೂರಿಗೆ ಹೋಗುವ ರಸ್ತೆ, ದಕ್ಷಿಣಕ್ಕೆ ನ್ಯಾಯ ಬೆಲೆ ಅಂಗಡಿ ಇದ್ದು, ಚೆಕ್ಕುಬಂಧಿ ಸುಳ್ಳು ಎಂದು ನುಡಿದಿರುತ್ತಾರೆ. ಮು.ಮಾ–1 ರ ಮೇಲೆ ಸೀರಿಯಲ್ ನಂಬರ್ ಬರೆದು ಪಂಚರ ಸಹಿ ಪಡೆದಿರುತ್ತೀರ ಎಂದರೆ ಇಲ್ಲ, ಮು.ಮಾ–1 ಮತ್ತು 2 ಕ್ಕೂ ಆರೋಪಿಗೂ ಯಾವುದೇ ಸಂಬಂಧ ಇಲ್ಲ ಎಂಬ ಅಂಶವನ್ನು ನಿರಾಕರಿಸಿರುತ್ತಾರೆ.

11. ಆರೋಪಿ ಪರ ವಕೀಲರನ್ನು ಪ್ರಾಸಾ–4 ರವರನ್ನು ಪಾಟೀ ಸವಾಲಿಗೆ ಒಳಪಡಿಸಿದಾಗ ಸದರಿಯವರು ಘಟನಾ ಸ್ಥಳದಲ್ಲಿ 3 ರಸ್ತೆಗಳು ಸೇರುತ್ತವೆ ಎಂದರೆ 2 ರಸ್ತೆಗಳು ಸೇರುತ್ತವೆ. ಒಂದು ರಸ್ತೆ ಕರಿಗೋಡನಹಳ್ಳಿಗೆ ಹೋಗುತ್ತದೆ ಇನ್ನೊಂದು ರಸ್ತೆ ಚಾಕನಹಳ್ಳಿಗೆ

ಹೋಗುತ್ತದೆ. ಬಿಳಿ ಚೀಲ ಎಲ್ಲಿ ಸಿಕ್ಕಿರುತ್ತದೆ ಎಂದರೆ ಬಸ್ ನಿಲ್ದಾಣದಲ್ಲಿ ಸಿಕ್ಕಿರುತ್ತದೆ. ಚೀಲದ ಚಹರೆಯ ಬಗ್ಗೆ ಮಹಜರ್ ನಲ್ಲಿ ಬರೆದಿದೆಯೇ ಎಂದರೆ ಇಲ್ಲ. ನಿಪಿ-1 ರಡಿಯಲ್ಲಿ ಮು.ಮಾ-1 ಮತ್ತು 2 ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

12. ಅಭಿಯೋಜನೆಯು ಚಾಸಾ-1, 2 ರವರನ್ನು ಪ್ರಾಸಾ-2 ಮತ್ತು 3 ಎಂದು ವಿಚಾರಣೆಗೆ ಒಳಪಡಿಸಿದಾಗ ಸದರಿಯವರು ನಿಪಿ-1 ರಲ್ಲಿ ಸಹಿಯನ್ನು ನೋಡಿ ಗುರುತಿಸಿದ್ದು, ನಿಪಿ-1(ಬಿ) ಮತ್ತು 1(ಸಿ) ಎಂದು, ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ-3(ಎ) ಮತ್ತು 3(ಸಿ) ಎಂದು ಗುರುತಿಸಲಾಗಿರುತ್ತದೆ. ನಿಪಿ-1 ರಲ್ಲಿ ಏನು ಬರೆಯಾಲಾಗಿದೆ ಗೊತ್ತಿಲ್ಲ ಎಂದು ಅಭಿಯೋಜನೆಗೆ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ.

13. ಅಭಿಯೋಜನೆಯ ಪ್ರಕಾರ ಪಂಚರಾದ ಪ್ರಾಸಾ- 2 ಮತ್ತು 3 ರವರ ಸಮಕ್ಷಮ ದಾಳಿ ಮಾಡಿ ನಿಪಿ-1 ಪಂಚನಾಮೆಯಡಿಯಲ್ಲಿ ಮು.ಮಾ-1 ಮತ್ತು 2ನ್ನು ಅಮಾನತ್ತುಪಡಿಸಿಕೊಳ್ಳಲಾಗಿದೆ ಎನ್ನುವುದು ಅಭಿಯೋಜನೆಯ ನಿಲುವಾಗಿದ್ದರೂ ಕೂಡ ನಿಪಿ-1 ರಲ್ಲಿ ಪಂಚರ ಸಾಕ್ಷಿದಾರರಾದ ಪ್ರಾಸಾ-2 ಮತ್ತು 3 ರವರು ಈ ಬಾಬ್ತು ಅಭಿಯೋಜನೆಗೆ ಸಂಪೂರ್ಣ ಪ್ರತಿಕೂಲವಾಗಿ ಸಾಕ್ಷಿ ನುಡಿದಿರುತ್ತಾರೆ. ಇವರನ್ನು ಪ್ರತಿಕೂಲ

ಸಾಕ್ಷಿಗಳು ಎಂದು ಪರಿಗಣಿಸಿದ ಸರ್ಕಾರಿ ವಕೀಲರು ನ್ಯಾಯಾಲಯದ ಅನುಮತಿಯ ಮೇರೆಗೆ ವಿವರವಾಗಿ ಪಾಟೀ ಸವಾಲಿಗೆ ಗುರಿಪಡಿಸಿದ್ದರೂ ಕೂಡಾ ಅಭಿಯೋಜನೆಯ ನಿಲುವಿಗೆ ಪೂರಕವಾಗುವಂತಹ ಯಾವುದೇ ಮಹತ್ವದ ಒಪ್ಪಿಗೆಗಳನ್ನು ಹೊರತರಿಸಿರುವುದಿಲ್ಲ. ಇವರನ್ನು ಹೊರತುಪಡಿಸಿ ಬೇರೆ ಯಾವುದೇ ಸ್ವತಂತ್ರ ಮತ್ತು ಸ್ವಾಭಾವಿಕ ಸಾಕ್ಷಿದಾರರನ್ನು ಸಾಕ್ಷಿ ಪಟ್ಟಿಯಲ್ಲಿ ಕೂಡಾ ಹೆಸರಿಸಲಾಗಿಲ್ಲ ಹಾಗೂ ಘಟನಾ ಸ್ಥಳದ ಆಸುಪಾಸಿನಲ್ಲಿ ಲಭ್ಯವಿರಬಹುದಾದ ಯಾವುದೇ ಸ್ವತಂತ್ರ ಹಾಗೂ ಸ್ವಾಭಾವಿಕ ಸಾಕ್ಷಿದಾರರನ್ನು ತನಿಖಾಧಿಕಾರಿಯು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ. ಪ್ರಕರಣದ ಮುಖ್ಯ ಸಾಕ್ಷಿದಾರರಾದ ಪ್ರಾಸಾ-1 ಮತ್ತು 4 ರವರ ಸಾಕ್ಷ್ಯವು ಮಾತ್ರವೇ ನ್ಯಾಯಾಲಯದ ಮುಂದೆ ಲಭ್ಯವಿದ್ದು ಸದರಿಯವರು ಆರಕ್ಷಕ ಸಾಕ್ಷಿದಾರರಾಗಿದ್ದು, ಸಹಜವಾಗಿ ಇವರ ಸಾಕ್ಷ್ಯವು ಅಭಿಯೋಜನೆಗೆ ಪೂರಕವಾಗಿರುವ ಸಂಗತಿಯನ್ನು ನ್ಯಾಯಾಲಯವೇ ಪರಿಗಣಿಸಬಹುದಾಗಿದೆ. ಈ ಎಲ್ಲಾ ಅಂಶಗಳನ್ನು ಜೊತೆ ಜೊತೆಯಾಗಿ ಪರಿಗಣಿಸುವಾಗ ಖಚಿತೆಯಿಂದ ಕೂಡಿರದ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯದ ಆಧಾರದಲ್ಲಿ ಆರೋಪಿಯ ವಿರುದ್ಧ ಆರೋಪ ನಿರ್ಣಯ ಕೈ ಗೊಳ್ಳುವುದು ಸಾಧ್ಯವಿರುವುದಿಲ್ಲ. ಲಭ್ಯವಿರುವ ಯಾವುದೇ ಸ್ವತಂತ್ರ ಹಾಗೂ ಸ್ವಾಭಾವಿಕ ಸಾಕ್ಷಿದಾರರನ್ನು ತನಿಖಾಧಿಕಾರಿಯು ವಿಚಾರಿಸಿ ಹೇಳಿಕೆ ಪಡೆದುಕೊಂಡಿರುವುದಿಲ್ಲ.

14. ಮಾದರಿ ದ್ರವ್ಯದ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ನಿಪಿ-7 ರಂತೆ ಗುರುತಿಸಿಕೊಳ್ಳಲಾಗಿದೆ. ಸದರಿ ದಾಖಲೆಯ ವಿವರಗಳ ಪ್ರಕಾರ ಮಾದರಿ ದ್ರವ್ಯದಲ್ಲಿ ಮದ್ಯಸಾರದ ಅಂಶವಿರುವುದು ಕಂಡುಬರುತ್ತದೆ. ಆದರೆ ಮಾದರಿ ದ್ರವ್ಯವನ್ನು ನಿಪಿ-1 ರಡಿಯಲ್ಲಿ ವಶಪಡಿಸಿಕೊಳ್ಳಲಾಗಿದೆ ಎನ್ನುವ ಸಂಗತಿಯನ್ನು ಖಚಿತವಾಗಿ ನಿರೂಪಿಸಲು ಅಭಿಯೋಜನೆ ವಿಫಲವಾಗಿರುವುದರಿಂದ ನಿಪಿ-7ರ ವಿವರಗಳನ್ನು ಆರೋಪ ನಿರ್ಣಯದಲ್ಲಿ ಪೂರಕ ಸಾಕ್ಷ್ಯವನ್ನಾಗಿ ಬಳಸಿಕೊಳ್ಳಲು ಆಸ್ಪದ ಇರುವುದಿಲ್ಲ. ಸದರಿ ಸಂಗತಿಯು ಅಭಿಯೋಜನೆಯ ನಿಲುವಿನ ಮೇಲೆಯೇ ಸಂಶಯ ಮೂಡಿಸುತ್ತದೆ. ಆದುದರಿಂದ ಪುಷ್ಠೀಕರಿಸಲ್ಪಡದ ಪ್ರಾಸಾ-1 ಮತ್ತು 4ರವರ ಸಾಕ್ಷ್ಯದ ಆಧಾರದಲ್ಲಿ ನಿಪಿ-1ರ ಅಡಿಯಲ್ಲಿ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಜಪ್ತುಪಡಿಸಿಕೊಳ್ಳಲಾಗಿದೆ ಎನ್ನುವುದಾಗಿ ಅಭಿಪ್ರಾಯ ಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ. ಹೀಗಾಗಿ ಪ್ರಕರಣದ ಒಟ್ಟಾರೆ ಸಂದರ್ಭಗಳ ಹಿನ್ನೆಲೆಯಲ್ಲಿ ಕೇವಲ ಆರಕ್ಷಕ ಸಾಕ್ಷಿದಾರರ ಸಾಕ್ಷ್ಯವನ್ನು ಆಧರಿಸಿ ಆರೋಪಿ ಮತ್ತು ಜಪ್ತುಪಡಿಸಿಕೊಳ್ಳಲಾದ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ನಡುವಿನ ಸಂಬಂಧ ರುಜುವಾತಾಗಿದೆ ಎಂದು ಅಭಿಪ್ರಾಯ ಪಡುವುದು ಅಪಾಯಕಾರಿಯಾಗಿ ಕಂಡುಬರುತ್ತದೆ.

15. ಒಟ್ಟಾರೆಯಾಗಿ ನ್ಯಾಯಾಲಯದ ಮುಂದೆ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಗಮನಿಸುವಾಗ ಆರೋಪಿಯು ಆಪಾಧಿಸಲಾದ ಕೃತ್ಯವನ್ನು ಎಸಗಿರುತ್ತಾರೆ ಎನ್ನುವ ಸಂಗತಿಯು

ರುಜುವಾತಾಗಿಲ್ಲ ಎನ್ನುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಆದುದರಿಂದ ಇನ್ನೂ ಹೆಚ್ಚಿನ ಚರ್ಚೆಗೆ ಆಸ್ಪದ ನೀಡದೇ ಆರೋಪಿಯ ವಿರುದ್ಧ ಹೊರಿಸಲಾದ ದೋಷಾರೋಪಣೆಯನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಅಭಿಯೋಜನೆ ವಿಫಲವಾಗಿದೆ ಎನ್ನುವುದಾಗಿ ಅಭಿಪ್ರಾಯಪಟ್ಟಿದ್ದು, ಈ ಮೇಲಿನ ಅಂಶಗಳನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

16. **ಅಂಶ ನಂ.2:** ಮೇಲೆ ಹೇಳಿದ ವಸ್ತುಸ್ಥಿತಿ ಮತ್ತು ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಆದೇಶ ಮಾಡಲಾಗಿದೆಃ

ಆದೇಶ

ಭಾರತೀಯ ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರನ್ವಯ ಆರೋಪಿಯನ್ನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32(1) ರಡಿಯಲ್ಲಿ ಶಿಕ್ಷಿಸಬಹುದಾದ ಅಪರಾಧಗಳಿಂದ ನಿರ್ದೋಷಿ ಎಂದು ತೀರ್ಮಾನಿಸಿ ಬಿಡುಗಡೆ ಮಾಡಲಾಗಿದೆ.

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 437(ಎ) ಅಡಿಯಲ್ಲಿ ಆರೋಪಿಯು ಬರೆದುಕೊಟ್ಟ ಜಾಮೀನು ಮುಚ್ಚಳಿಕೆ ಮುಂದಿನ 6 ತಿಂಗಳುಗಳವರೆಗೆ ಚಾಲ್ತಿಯಲ್ಲಿ ಇರತಕ್ಕದ್ದು, ನಂತರ ಆರೋಪಿ ಬರೆದುಕೊಟ್ಟ ಜಾಮೀನು ಮುಚ್ಚಳಿಕೆಯನ್ನು ರದ್ದುಪಡಿಸಲಾಗಿದೆ.

ಮು.ಮಾ-1 ಮತ್ತು 2ನ್ನು ಉಪಯೋಗಕ್ಕೆ ಬಾರದಂತಹ ವಸ್ತುಗಳಾಗಿರುವ ಕಾರಣ ಮೇಲ್ಮನವಿ ಅವಧಿ ಮುಗಿದ ನಂತರ ನಾಶಪಡಿಸತಕ್ಕದ್ದು.

(ತೀರ್ಪನ್ನು ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಉಕ್ತಲೇಖಿಸಿ ಅವರು ಅದನ್ನು ಲಿಪ್ಯಂತರ ಮಾಡಿದ ನಂತರ ನಾನು ತಿದ್ದಿ ಸಹಿ ಮಾಡಿ ದಿನಾಂಕಃ ***4ನೇ ಏಪ್ರಿಲ್ 2025*** *ರ ಈ ದಿನ ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿರುತ್ತೇನೆ)*

(ಸ್ನೇಹಾ ಎಂ.)
ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಆಲೂರು.

ಅನುಬಂಧ

ಅಭಿಯೋಜನೆ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ

ಫ್ರಾಸಾ-1	:	ಉಮೇಶ್.ಹೆಚ್.ಬಿ
ಫ್ರಾಸಾ-2	:	ನಾರಾಯಣಗೌಡ
ಫ್ರಾಸಾ-3	:	ಸುಬ್ಬಯ್ಯ
ಫ್ರಾಸಾ-4	:	ವನಜಾಕ್ಷಿ ಆರ್.ಎನ್

ಅಭಿಯೋಜನೆ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿಃ

ನಿಪಿ-1	:	ಮಹಜರ್
ನಿಪಿ-1(ಎ ರಿಂದ ಡಿ)	:	ಸಹಿಗಳು.
ನಿಪಿ-2	:	ರಾಸಾಯನಿಕ ವಿಶ್ಲೇಷಣಾ ವರದಿ
ನಿಪಿ-3	:	ಮಾದರಿ ಸೀಲಿನ ನಕಲು
ನಿಪಿ-3(ಎ)	:	ಸಹಿ
ನಿಪಿ-4 ಮತ್ತು 5	:	ಹೇಳಿಕೆಗಳು
ನಿಪಿ-6	:	ಪ್ರಥಮ ವರ್ತಮಾನ ವರದಿ.

ನಿಪಿ–6(ಎ)	:	ಸಹಿ
ನಿಪಿ–7	:	ಪತ್ರ
ನಿಪಿ–7(ಎ)	:	ಸಹಿ.

ಅಭಿಯೋಜನೆ ಪರ ಗುರುತಿಸಲಾದೆ ಮುದ್ದೆಮಾಲುಗಳ ಪಟ್ಟಿಃ

ಮು.ಮಾ–1	:	26 ಟೆಟ್ರಾ ಪ್ಯಾಕೆಟ್ ಗಳು
ಮು.ಮಾ–2	:	ಪ್ಲಾಸ್ಟಿಕ್ ಚೀಲ

ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳ ಪಟ್ಟಿಃ

–ಇಲ್ಲ–

ಆರೋಪಿ ಪರ ನಿಶಾನಿಸಲಾದ ದಾಖಲೆಗಳ ಪಟ್ಟಿಃ

–ಇಲ್ಲ–

ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಆಲೂರು.